ಶ್ರೀ ಬಿ. ಸ್ವಾಮಿರಾವ್.—ಈಗ ಎಷ್ಟು ಜಿಲ್ಲಾ ಕೇಂದ್ರಗಳಲ್ಲಿ ಕಲಾ ಕೇಂದ್ರಗಳಿವೆ ಮತ್ತು ಅವು ಯಾವ್ಯಾವ ಸ್ಥಳಗಳಲ್ಲಿವೆ ? ಅಲ್ಲಿ ವಿಶ್ವ ಕನ್ನಡ ಸಮ್ಮೇಳನದ ಯೋಜನೆ ಪ್ರಕಾರ ಮತ್ತೊಂದು ಮಂದಿರವನ್ನು ಕಟ್ಟತಕ್ಕ ಯೋಜನೆ ಸರ್ಕಾರದಲ್ಲಿದೆಯೇ ?

ಶ್ರೀ ಜೀವರಾಜ ಆಳ್ವ.—ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಜಿಲ್ಲೆಗೆ ಒಂದು ರಂಗ ಮಂದಿರ ಎಂಬ ಕಾರ್ಯಕ್ರಮದ ಮೇಲೆ ಈ ಕಾರ್ಯಕ್ರಮವನ್ನು ಆರಂಭ ಮಾಡಿದ್ದೇವೆ. ಈಗ ಮೈಸೂರು ರಂಗ ಮಂದಿರವನ್ನು ಬಿಟ್ಟರೆ ಜೇರೆ ಎಲ್ಲಿಯೂ ಮಾಡಿಲ್ಲ. ಶಿವಮೊಗ್ಗದಲ್ಲಿ ಶಿಲಾನ್ಯಾಸವಾಗಿದೆ. ಸ್ಥಳೀಯ ಸಂಸ್ಥೆಯವರ ಮತ್ತು ಸಾರ್ವಜನಿಕರ ವಂತಿಕೆಯನ್ನು ಸೇರಿಸಿ ರಂಗ ಮಂದಿರ ಮಾಡಬೇಕೆಂದು ಸರ್ಕಾರದ ಗುರಿಯಾಗಿದೆ.

ಶ್ರೀ ಬಿ. ಸ್ವಾಮಿರಾವ್,—ಒಂದೊಂದು ಕಲಾ ಕೇಂದ್ರದ ಸಿಟಿಂಗ್ ಕೆಪಾಸಿಟಿ ಎಷ್ಟು ?

ಅಧ್ಯಕ್ಷರು.—ಇನ್ನೂ ಪ್ರಾರಂಭಮಾಡಿಲ್ಲವೆಂದರೆ ಕೆಪಾಸಿಟಿ ಏನು ಬಂತು ?

ಶ್ರೀ ಜೀವರಾಜ ಆಳ್ವ.—ಸುಮಾರು ೮೦೦ ರಿಂದ ೧೦೦೦ ಆಸನಗಳು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ಖರ್ಚು ಮಾಡತಕ್ಕ ದುಡ್ಡು ಬಹಳ. ಅಷ್ಟನ್ನು ಖರ್ಚು ಮಾಡಬಾರದೆಂದು ಚುನಾವಣಾ ಸಂದರ್ಭದಲ್ಲಿ ಬಹಳ ಪ್ರಚಾರ ನಡೆದಿತ್ತು. ಅದಕ್ಕನುಗುಣವಾಗಿ ಇವತ್ತು ಕಾರ್ಯಕ್ರಮ ಕೈಗೊಳ್ಳುವುದು ಸೂಕ್ತ. ರಂಗಮಂದಿರಗಳಿಗೆ ಖರ್ಚು ಮಾಡುವುದಕ್ಕೆ ಬದಲಾಗಿ ಆ ಹಣವನ್ನು ಶಾಲಾ ಕಟ್ಟಡ ಕಟ್ಟಿಸುವುದಕ್ಕೆ ಉಪಯೋಗಿಸಿದರೆ ಸಾರ್ಥಕವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಬಸವರಾಜ ಕಟ್ಟೀಮನಿಯವರು ವಿಶ್ವ ಕನ್ನಡ ಸಮ್ಮೇಳನವನ್ನು ಕೈಬಿಡುವುದು ಸೂಕ್ತವೆಂದು ಹೇಳಿದ್ದಾರೆ. ಆದ್ದರಿಂದ, ಇದನ್ನು ಬಿಡುವುದಕ್ಕೆ ಸರ್ಕಾರ ಯೋಜನೆ ಮಾಡುತ್ತದೆಯೇ ?

ಶ್ರೀ ಜೀವರಾಜ ಆಳ್ವ.—ಹಿರಿಯ ಸದಸ್ಯರು ಅಭಿಪ್ರಾಯ ಕೊಟ್ಟಿದ್ದಾರೆ. ಆದರೂ ಕೂಡ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಜಿಲ್ಲೆಗೊಂದು ರಂಗ ಮಂದಿರವನ್ನು ಮಾಡಬೇಕೆಂದು ಇದೆ. ಏಕೆಂದರೆ ಹೆಚ್ಚಿನ ಜಿಲ್ಲಾ ಕೇಂದ್ರಗಳಲ್ಲಿ ರಂಗ ಮಂದಿರಗಳು ಇಲ್ಲ. ಆದ್ದರಿಂದ, ಜಿಲ್ಲೆಗೆ ಒಂದೊಂದಾದರೂ ರಂಗ ಮಂದಿರ ಇರತಕ್ಕದ್ದು ಅಗತ್ಯವೆಂದು ಸರ್ಕಾರದ ಭಾವನೆ.

ಶ್ರೀ ಬಿ. ಸ್ವಾಮಿರಾವ್.—ಹೊಟ್ಟಿಗೆ ಹಿಟ್ಟಿಲ್ಲದಾಗ ಜುಟ್ಟಿಗೇಕೆ ಮಲ್ಲಿಗೆ ಹೂವು ? ಆದ್ದರಿಂದ ಈ ಯೋಜನೆಯನ್ನು ಕೈಬಿಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಪಿ. ರಾಮದೇವ್.—ಬೆಂಗಳೂರು ನಗರದಲ್ಲಿರತಕ್ಕ ರಂಗ ಮಂದಿರಗಳ ಪರಿಸ್ಥಿತಿಯನ್ನು ನೋಡಿ. ರವೀಂದ್ರ ಕಲಾಕ್ಷೇತ್ರವನ್ನು ಮುಚ್ಚಿ ೩-೪ ತಿಂಗಳು ಆಯಿತು. ಈಗ ಪಕ್ಕದಲ್ಲಿ ಷೆಡ್ ಹಾಕಿಕೊಂಡು ಕಾರ್ಯಕ್ರಮ ನಡೆಸುತ್ತಿದ್ದಾರೆ. ಚೌಡಯ್ಯ ಮೆಮೋರಿಯಲ್ ಹಾಲ್ ಬಹಳ ದುಬಾರಿ. ಇದರಿಂದ ಹವ್ಯಾಸಿ ನಾಟಕಕಾರರಿಗೆ ಬಹಳ ಕಷ್ಟವಾಗಿದೆ. ಟೌನ್ ಹಾಲ್ ಸರಿಯಾಗಿಲ್ಲ. ಆದ್ದರಿಂದ ನಗರದಲ್ಲಿ ಉತ್ತಮವಾದ ರಂಗ ಮಂದಿರವನ್ನು ಕಟ್ಟತಕ್ಕ ವ್ಯವಸ್ಥೆಯನ್ನು ವಿಶ್ವ ಕನ್ನಡ ಸಮ್ಮೇಳನವನ್ನು ಮಾಡುವುದಕ್ಕೆ ಮುಂಚೆಯೇ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ —ಬೆಂಗಳೂರು ನಗರದಲ್ಲಿ ಹವ್ಯಾಸಿ ಕಲಾವಿದರಿಗೆ ಸರಿಯಾದ ರಂಗ ಮಂದಿರವನ್ನು ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆ. ಪೂನಂ ಮತ್ತು ಸಿಂಪೋನಿ ಎಂಬ ಎರಡು ಚಿತ್ರ ಮಂದಿರಗಳನ್ನು ರಂಗ ಮಂದಿರಗಳನ್ನಾಗಿ ಪರಿವರ್ತಿಸುವ ಕಾರ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಮಕ್ಕಳ ಚಲನಚಿತ್ರಗಳಿಗೆ ಮನರಂಜನಾ ತೆರಿಗೆ ಮನ್ನಾಮಾಡುವ ಬಗ್ಗೆ

೪೩೫ (೧೭೭) ಶ್ರೀ ಪಂಪಾಪತಿ (ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಭಾರತ ಸರ್ಕಾರದಿಂದ ಸ್ಥಾಪಿತವಾದ ಚಿಲ್ಡ್ರನ್ಸ್ ಫಿಲ್ಮ್ ಸೊಸೈಟಿ ಆಫ್ ಇಂಡಿಯಾ, ಬೊಂಬಾಯಿ ಸಂಸ್ಥೆಯ ಅಧ್ಯಕ್ಷರು ಮುಖ್ಯಮಂತ್ರಿಗಳಿಗೆ ಮಕ್ಕಳ ಚಲನಚಿತ್ರಗಳಿಗೆ ತೆರಿಗೆ ಮನ್ನಾ ಮಾಡಲು ಕೇಳಿ ಪತ್ರ ಬರೆದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು ?

ಇ) ತೆರಿಗೆ ಮನ್ನಾ ಮಾಡಲು ಸರ್ಕಾರ ತೀರ್ಮಾನ ಕೈಗೊಂಡಿದೆಯೇ ? ಆ ಬಗ್ಗೆ ಆಜ್ಞೆ ಹೊರಡಿಸಿದೆಯೇ ?

ಈ) ಮಕ್ಕಳ ಚಿತ್ರಗಳ ತಯಾರಿ ಮತ್ತು ಪ್ರದರ್ಶನಗಳಿಗೆ ಪ್ರೋತ್ಸಾಹ ಕೊಡಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು)

ಅ) ಹೌದು.

ಆ) ಸಲಹೆಗಳು ಪರಿಶೀಲನೆಯಲ್ಲಿ ಇವೆ.

ಇ) ಕರ್ನಾಟಕ ಮನರಂಜನಾ ತೆರಿಗೆ ಅಧಿನಿಯಮದ ೧೯೫೯ರ ಪರಿಚ್ಛೇದ ೭(ಬಿ) (೨)ರ ರೀತ್ಯ ಮಕ್ಕಳ ಚಿತ್ರಗಳಿಗೆ ಮನರಂಜನಾ ತೆರಿಗೆ ಮನ್ನಾ ಮಾಡಲು ಅವಕಾಶವಿದೆ. ಈ ವಿನಾಯಿತಿಯನ್ನು ಪ್ರಾಂತೀಯ ಭಾಷೆಗಳ (ಕನ್ನಡ, ತುಳು, ಕೊಂಕಣಿ ಮತ್ತು ಕೊಡವ) ಚಿತ್ರಕ್ಕೆ ೬ (ಆರು) ವಾರಗಳವರೆಗೂ ಮತ್ತು ಇತರೆ ಭಾಷೆಗಳ ಚಿತ್ರಕ್ಕೆ ೩ (ಮೂರು) ವಾರಗಳವರೆಗೂ ಕೊಡಬಹುದು.

ಈ) ಮೇಲ್ ಮೇಳಿರತಕ್ಕಂಥಹ ತೆರಿಗೆ ಮನ್ನಾ ಅವಕಾಶವಲ್ಲದೆ, ಬೇರೆ ಚಲನಚಿತ್ರಗಳಿಗೆ ಕೊಡುವ ಸಹಾಯಧನದ ಸೌಲಭ್ಯವು ಸ್ಥಳೀಯ ಭಾಷಾ ಮಕ್ಕಳ ಚಲನ ಚಿತ್ರಗಳಿಗೂ ಸಹ ಲಭ್ಯವಿದೆ.

ಸರ್ಕಾರವು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ಕೆಲವು ಮಕ್ಕಳ ಅಭಿರುಚಿಯ ಚಲನಚಿತ್ರಗಳನ್ನು ತಯಾರಿಸಿ ಪ್ರದರ್ಶಿಸುತ್ತಿದೆ.

ಮಾನ್ಯ ಸದಸ್ಯರು ಗೈರುಹಾಜರಿ.

ವಿಷಯ.—ಕೊಡಗು ಜಿಲ್ಲೆಗೆ ಔಷಧಿಯನ್ನು ಸರಬರಾಜು ಮಾಡುವುದು

ಪ್ರಶ್ನೆ ಸಂ.೬೬೬. (೧೮೨) ಶ್ರೀ ಎಂ.ಪಿ. ನಾಣಯ್ಯ (ಮಡಿಕೇರಿ). —ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ?

(ಅ) ಮಡಿಕೇರಿಯಲ್ಲಿ ಜಿಲ್ಲಾ ಆಸ್ಪತ್ರೆಯಲ್ಲಿ ಔಷಧಿಗಳ ಮತ್ತು ನರಾಂತರವಾಹಿ ಬೃಹಾಹಾರ (ಐ.ವಿ.ಫ್ಲೂಯಿಡ್)ಗಳ ಕೊರತೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಆ) ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

(ಇ) ಕೊಡಗು ಜಿಲ್ಲೆಗೆ ಸರಬರಾಜಾಗಿರುವ ಔಷಧಿಗಳು ಉತ್ಪನ್ನ ವರ್ಜಿಯಾಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

(ಈ) ಹಾಗಿದ್ದಲ್ಲಿ ಈ ಅವ್ಯವಸ್ಥೆಯು ಸರಬರಾಜಿನ ಹಿರಿಯ ಸರ್ಕಾರದವರು ಕೈಗೊಂಡ ಕ್ರಮವೇನು?

(ಉ) ಕೊಡಗು ಜಿಲ್ಲೆಗಾಗಿ ಔಷಧಿಗಳಿಗಾಗಿ ಪಷ್ಟಾಪೂರ್ವಕ್ಕೆ ಪೆಟ್ಟ ಮಾಡಿರುವ ಕಾರಣವೇನು.

ಶ್ರೀ ಬಿ.ಜಿ.ಆರ್. ಸಿಂಧ್ಯ. —(ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು)

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.